## ಒಂಟಿತನಕ್ಕೆ ಮಹಿಳೆಯರೂ ಕಾರಣ

ಪುರುಷಪ್ರಧಾನ ವ್ಯವಸ್ಥೆಯಲ್ಲಿ ಮಿಂದು ಬೆಳೆದಿರುವ ಮಹಿಳೆಯರಲ್ಲಿ ಕೆಲವರು ತಮ್ಮ ಸಾಧನೆಗಳನ್ನು ಇತರರು ಗುರುತಿಸಿ, ಒಮ್ಮತ ನೀಡಲಿ ಎಂಬ ನಿರೀಕ್ಷೆಯಲ್ಲಿರುತ್ತಾರೆ.

ಜಗತ್ತಿನ ಸ್ಪರ್ಧೆಯನ್ನು ಮಹಿಳೆಯರು ಪುರುಷರಿಗಿಂತ ಹೆಚ್ಚು ಗಂಭೀರವಾಗಿ ತೆಗೆದುಕೊಳ್ಳುತ್ತಾರೆ. ಅದರ ಸಾಧಕ ಬಾಧಕಗಳಿಂದ ಅತಿ ಹೆಚ್ಚು ಕೋಟಲೆಗೆ ಒಳಗಾಗುವುದು ಕೂಡ ಮಹಿಳೆಯರೇ. ಅವರಿಗೆ ಇತರರಿಂದ ಸತತವಾಗಿ ಭರವಸೆ ಮತ್ತು ಮೆಚ್ಚುಗೆಗಳು ಬೇಕು. ಆದರೆ, ಉನ್ನತ ಹಂತಗಳನ್ನು ತಲುಪುವ ಮಹಿಳೆಯರಿಗೆ ಭರವಸೆ ಮತ್ತು ಮೆಚ್ಚುಗೆಗಳು ಇಲ್ಲವಾಗುತ್ತ ಹೋಗುವುದು ಅವರನ್ನು ಒಂಟಿಯಾಗಿಸುತ್ತ ಹೋಗುತ್ತದೆ. ಹಾಗೆ ನೋಡಿದರೆ ಇದೊಂದು ಸಾಮಾನ್ಯ ಪ್ರಕ್ರಿಯೆ. ಯಶಸ್ವಿ ಪುರುಷರಲ್ಲಿಯೂ ಇದು ಕಂಡುಬರುತ್ತದೆ.

ತನ್ನ ವೇಗದ ಓಟಕ್ಕೆ ಅತ್ಯಂತ ಹೆಸರುವಾಸಿಯಾದ ಉಸೇನ್ ಬೋಲ್ಟ್ ತನ್ನ ಉಚ್ಛ್ರಾಯ ದಿನಗಳಲ್ಲಿ ಘೋರ ಒಂಟಿತನವನ್ನು ಅನುಭವಿಸುತ್ತ ಖಿನ್ನತೆಗೆ ಜಾರಿದ್ದು ಜಗತ್ತಿಗೇ ತಿಳಿದ ವಿಚಾರ. ಹಿರಿಯ ಮಟ್ಟವನ್ನು ತಲುಪುವ ಎಲ್ಲರಿಗೂ ಒಂಟಿತನ ಕಾಡುತ್ತದೆಯಾದರೂ, 'ತನ್ನ ಅಂಕೆಗೆ ಸಿಗದ ಹೆಂಡತಿ', 'ಸಮಯ ನೀಡದ ತಾಯಿ' ಎಂದೆಲ್ಲ ಹತ್ತಿರದ ವಲಯಗಳಲ್ಲಿ ನಿಂದನೆಗೆ ಒಳಗಾಗುವುದು ಮುಖ್ಯವಾಗಿ ಮಹಿಳೆಯರು ಮಾತ್ರ. ಗಂಡಸರು ಇದೇ ಸಾಧನೆಯನ್ನು ಮಾಡಿದಾಗ ಅವರನ್ನು ಸಮಾಜ ಉದಾರವಾಗಿ ಹೊಗಳುತ್ತದೆ.

ಸಾಧಕಿಯರಿಗೆ ಇಂಬಾಗಿ ಬೆಂಬಲ ನೀಡುವ ಸಹೃದಯಿ ಪುರುಷರು ಇಲ್ಲವೆಂದಲ್ಲ. ಆದರೆ, ಅವರನ್ನು ಜಗತ್ತು ತನ್ನ ವ್ಯಂಗ್ಯ ಮತ್ತು ಟೀಕೆಗಳಿಂದ ಹೈರಾಣಾಗಿಸಿ, 'ತನ್ನ ಸಂಗಾತಿಗೆ ತನ್ನಿಂದ ತೊಂದರೆ' ಎಂಬ ಅಪರಾಧಿ ಭಾವವನ್ನು ಮಹಿಳೆಯರಲ್ಲಿ ತುಂಬುವುದು ಪೂರ್ವಗ್ರಹ ಪೀಡಿತ ಸಮಾಜದಲ್ಲಿ ನಡೆಯುತ್ತಲೇ ಬಂದಿದೆ.

ಪುರುಷರಿಗೆ ಅಡಿಯಾಳಾಗಿರುವುದನ್ನು ಶ್ರೇಷ್ಠ ಎಂದು ವಿಜೃಂಭಿಸುವ ಅದೇ ಸಮಾಜ ಮಹಿಳೆಗೆ ಬೆಂಬಲವಾಗಿ ಸಹಕರಿಸುವ ಪುರುಷನನ್ನು ಕೀಳಾಗಿ ನೋಡುವ ಹೊಲಸು ಮನಸ್ಥಿತಿಗೆ ಶರಣಾಗಿದೆ. 'ಯಜಮಾನ', 'ಪತಿದೇವರು' ಇತ್ಯಾದಿ ಹೆಸರಿನಿಂದ ಪುರುಷರನ್ನು ಸಂಬೋಧಿಸುವ ಸಮಾಜ, ಹೆಂಡತಿಗೆ ಸಹಾಯ ಮಾಡುವ ಗಂಡಸರನ್ನು 'ಅಮ್ಮಾವ್ರ ಗಂಡ' ಎಂದು ಗೇಲಿ ಮಾಡುತ್ತದೆ. ಈ ಅರ್ಥದ ಜೋಕ್ಸ್ ಅಥವಾ ಕಾರ್ಟೂನುಗಳನ್ನು ಮಾಧ್ಯಮಗಳು ಕೂಡ ಕಡಿಮೆ ಮಾಡಿದರೆ ಸಮಾಜದ ಪೂರ್ವಗ್ರಹಗಳು ಕಡಿಮೆಯಾಗಲು ಸಹಾಯವಾಗುತ್ತದೆ.

ಸ್ಥಾನದಲ್ಲಿರಬೇಕು. ಅವಳಿಗಿಂತ ಎತ್ತರವಿರಬೇಕು, ಹೆಚ್ಚು ಓದಿರಬೇಕು, ಹೆಚ್ಚು ತಿಳಿದುಕೊಂಡಿರಬೇಕು ಮತ್ತು ಹೆಚ್ಚು ದುಡಿಯುತ್ತಿರಬೇಕು.

ಬಹುತೇಕ ಗಂಡಸರಿಗೆ ಅವರಿಗಿಂತ ಹೆಚ್ಚಿನ ಬುದ್ಧಿವಂತ ಮತ್ತು ದುಡಿಮೆಯ ಶಕ್ತಿಯನ್ನು ಹೊಂದಿರುವ ಮಹಿಳೆಯರೆಂದರೆ ಅತಿಹೆಚ್ಚಿನ ಭಯವಿದೆ. ಅಂತಹವರು ಇದ್ದರೆ ಅವರನ್ನು ಕಡೆಗಣಿಸುವುದು, ಅವರು ಮೇಲೇರದಂತೆ ಪಿತೂರಿ ವಹಿಸಲು ಒಗ್ಗೂಡುವುದು ಕೂಡ ನಡೆಯುತ್ತದೆ. ಇಂತಹವರ ಮೇಲೆ ಅಸೂಯೆಯಿರುವ ಇತರೆ ಸಾಧಾರಣ ಬುದ್ಧಿಮತ್ತೆಯ ಮಹಿಳೆಯರೂ ಇದಕ್ಕೆ ಒಂದುಗೂಡಬಹುದು. ಇವರೆಲ್ಲ ಸೇರಿ ಯಶಸ್ವಿ ಮಹಿಳೆಯರನ್ನು ಹಿಂದಿಕ್ಕಲು ನಾನಾ ರೀತಿಯ ಪಿತೂರಿಗಳನ್ನು ಮಾಡಬಹುದು. ಇದೆಲ್ಲದರ ಅರಿವಿದ್ದೂ, ಒಬ್ಬ ಸಾಧಕಿ ಅವರನ್ನು ನಿರ್ಲಕ್ಷಿಸಿ ಮುಂದೆ ನಡೆಯಬೇಕಾಗುತ್ತದೆ. ಅವರ ನಡುವೆಯೇ ಬದುಕುತ್ತ, ಅವರ ಪಿತೂರಿಗಳು ತನಗೆ ತಾಗದಂತೆ ದೂರವಿರಬೇಕಾಗುತ್ತದೆ. ಅಂದರೆ, ಅವರ ಮಿತ್ರವೃಂದ ಸಂಕುಚಿತವಾಗುತ್ತ ಹೋಗುತ್ತದೆ. ಶಕ್ತಿಶಾಲಿ ಮಹಿಳೆಯರನ್ನಂತೂ ಮಹಿಳೆಯೇ ಅಲ್ಲ ಎನ್ನುವಂತೆ ವರ್ಣಿಸಲಾಗುತ್ತದೆ.

ಸಾಧಕಿಯರ ಏಕಾಗ್ರ ಚಿತ್ತತೆಯ ಕಾರಣ ಅವರ ಮನಸ್ಸು ಸ್ಫಟಿಕದಂತೆ ಶುಭ್ರವಾಗಿದ್ದರೂ, ಇತರೆ ಮಹಿಳೆಯರಂತೆ ಗಂಡಸನ್ನು ಮರುಳುಮಾಡುವ ಕಲೆಗಳಾಗಲೀ, ಮಹಿಳೆಯಂತೆ ನಾಚುವ, ವಯ್ಯಾರ ಮಾಡುವ, ಗಂಡಸರನ್ನು ಉದ್ರೇಕಿಸುವ ನಡತೆ ಅವರಲ್ಲಿ ಇಲ್ಲದಿರಬಹುದು. ಅದನ್ನು 'ಗಂಡುಬೀರಿ', 'ಅನಾಕರ್ಷಕ ನಡವಳಿಕೆ', 'ರಸಹೀನತೆ' ಎಂದೆಲ್ಲ ಕರೆವ ಪುರುಷರು ಅವಳಿಂದ ದೂರವಾಗಿ, ಇಂತಹ ಮಹಿಳೆಯರು ಒಂಟಿತನ ಅನುಭವಿಸಲು ಪರೋಕ್ಷವಾಗಿ ಕಾರಣರಾಗಬಹುದು.

ಇಂತಹವರಿಂದ ಅವಳಿಗೆ ತಾನು ಬೇಕಿಲ್ಲದವಳಂತೆ, ಆಕರ್ಷಕವಲ್ಲದಂತೆ ಮತ್ತು ಪ್ರಯೋಜನಕ್ಕೆ ಬಾರದವಳಂತೆ ಅನ್ನಿಸಿ ಅವಳು ಮತ್ತಷ್ಟು ತನ್ನ ಸಾಧನೆಯೆಡೆ ತಿರುಗಿ ಒಂಟಿಯಾಗಬಹುದು. ಅವಳಿಗೆ ಬೇಕಾದ ಭರವಸೆ, ನೈಜತೆ, ನಂಬಿಕೆ ಮತ್ತು ದೃಢತೆಗಳನ್ನು ನೀಡಬಲ್ಲ, ಅರ್ಥಮಾಡಿಕೊಳ್ಳುವ ಸಂಗಾತಿಗಾಗಿ ಅವಳ ಕಾಯುವಿಕೆ ಅವಿರತ ಮುಂದುವರೆಯಬಹುದು.

ವಿಪರ್ಯಾಸವೆಂದರೆ ಈ ರೀತಿ ತಾರತಮ್ಯ ಮಾಡುವ ಸಮಾಜ ಅವಳ ನಿರೀಕ್ಷೆಯ ಮಟ್ಟದಲ್ಲಿ ಅವಳಿಗೆ ಕೂಡ ಅನಾಕರ್ಷಕವಾಗಿ ಕಂಡು ಅವಳು ಅದರೆಡೆ ಕಟುಹೃದಯಿಯಾಗಬಹುದು.

ಒಬ್ಬ ಶಕ್ತ, ಪ್ರತಿಭಾವಂತ, ಬುದ್ಧಿವಂತ ಮತ್ತು ಸಾಧಕಿಗೆ ಹೋಲಿಸಿದರೆ ಅತ್ಯಂತ ಸಾಧಾರಣ, ತಿಳಿವಳಿಕೆ ಇಲ್ಲದ, ಅಸಹಾಯಕ ಮಹಿಳೆ ಪುರುಷರಿಗೆ ಹೆಚ್ಚು ಆಕರ್ಷಕವಾಗಿ ಕಾಣುವುದರ ಹಿಂದೆ, ಪ್ರಕೃತಿಯ ತನ್ನ ಜೋಡಿ ಜೀವಿಯನ್ನು ನಿಯಂತ್ರಿಸುವ, ಆಳುವ, ಅವರ ಮುಂದೆ ತಾವೇ ಶ್ರೇಷ್ಠರೆಂದು ತೋರಿಸಿಕೊಳ್ಳುವ, ಆ ಮೂಲಕ ತಾನು ಆಕರ್ಷಕವಾಗಿ ಕಾಣುತ್ತಿದ್ದೇನೆ ಎನ್ನುವ ಆತ್ಮರತಿಯನ್ನು ನೇವರಿಸುವ ಪ್ರಬಲ ಇಚ್ಛೆಯ ಪುರುಷನ ದೌರ್ಬಲ್ಯವೇ ಮುಖ್ಯ ಕಾರಣವಾಗಿರುವುದನ್ನು ಕೆಲವು ಅಧ್ಯಯನಗಳು ಸಾಬೀತುಪಡಿಸಿವೆ.



ಒಬ್ಬ ಯಶಸ್ವಿ ಮಹಿಳೆಯು ತಮ್ಮ ಪೌರುಷಕ್ಕೆ ಎದುರಾಳಿ ಎಂದು ಭಾವಿಸುವ ಪುರುಷನ ಮೂಲಭೂತ ಧಾರ್ಷ್ಟ್ಯ ಮತ್ತು ಗ್ರಹಿಕೆಗಳೇ ಇಂತಹ ಅಸಮತೋಲನಕ್ಕೆ ನಾಂದಿ ಹಾಡಿವೆ.

ಮಾನಸಿಕವಾಗಿ ಪುರುಷರಿಗೆ ತಾವು ಸುರಕ್ಷಿತ ಎನ್ನಿಸುವುದೇ ಹೆಣ್ಣಿನ ಮೂಲಕ. ಅಸಹಾಯಕತೆಯನ್ನು